† ಶ್ರೀ ಕೆ. ಲಕ್ಕಪ್ಪ.—ಈಗಾಗಲೇ ಉತ್ತರ ಕೊಟ್ಟಿರುವ ಹಾಗೆ ಅದು ಪಿ.ಡಬ್ಲ್ಯು.ಡಿ. ಗೆ ಸೇರಿದಂಥ ರಸ್ತೆ ಅಲ್ಲ. ಪ್ರಾಯಶಃ ಹಿಂದೆ ಇದ್ದಂಥ ಪಿ.ಡಬ್ಲ್ಯು.ಡಿ. ಮಿನಿಸ್ಟರ್ ಬಂದಿದ್ದಾಗ ಸಾಧ್ಯವಾದರೆ ನೋಡುತ್ತೇವೆ ಎಂದು ಹೇಳಿರಬಹುದು. ಈಗಲೂ ನಾನು ಹೇಳುವುದು ಅದೇ ಉತ್ತರ. ಈಗಾಗಲೇ ನಾವು ಸಾಕಷ್ಟು ರಸ್ತೆಗಳನ್ನು ತೆಗೆದುಕೊಂಡಿದ್ದೇವೆ, ಅವುಗಳನ್ನು ಮಾಡಿಸುವುದಕ್ಕೆ ಸಾಕಷ್ಟು ಹಣದ ವ್ಯವಸ್ಥೆ ಇಲ್ಲದೇ ಇರುವ ಕಾರಣ ಹೊಸ ಹೊಸ ರಸ್ತೆಗಳನ್ನು ತೆಗೆದುಕೊಳ್ಳುವ ಗೋಜಿಗೆ ಹೋಗಿಲ್ಲ. ಆದರೂ ಹಣಕಾಸಿನ ಪರಿಸ್ಥಿತಿ ಸುಧಾರಣೆ ಆದಾಗ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ರತ್ನಕುಮಾರ್ ಶೆಟ್ಟಿ.—ಶಿರತಾಡಿಯಿಂದ ಮಂತ್ರಾಡಿ ಮಾರ್ಗವಾಗಿ ರಬೆಟ್ಟುಗೆ ಹೋಗುವ ರಸ್ತೆ ತಾಲ್ಲೂಕು ಅಭಿವೃದ್ಧಿ ಮಂಡಳಿಯು ಅಧೀನದಲ್ಲಿರುವುದರಿಂದ ವಿಳಂಬವಾಗುತ್ತಿದೆ ಎಂದು ತಿಳಿಸಿದ್ದಾರೆ. ತಾಲ್ಲೂಕು ಬೋರ್ಡ್ ವ್ಯವಹಾರದಲ್ಲಿ ಯಾವ ರೀತಿಯಲ್ಲಿಯೂ ಸರ್ಕಾರದವರು ಕೈ ಹಾಕುವುದಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಇಲ್ಲಿ ಉತ್ತರ ಕೊಟ್ಟಿರುವ ಹಾಗೆ ಅದು ತಾಲ್ಲೂಕು ಬೋರ್ಡಿಗೆ ಸೇರಿದಂಥ ರಸ್ತೆ. ಅದನ್ನು ಮಾಡಿನತಕ್ಕ ಜವಾಬ್ದಾರಿ ಅವರದೇ ಆಗಿರುವುದರಿಂದ ಅವರು ಮಾಡತಕ್ಕ ರಸ್ತೆಗಳಲ್ಲಿ ನಾವು ಕೈ ಹಾಕುವುದಕ್ಕಾಗುವುದಿಲ್ಲ. ರಸ್ತೆ ಕೆಲಸ ಮಾಡಿಲ್ಲ ಎಂದರೆ ಅವರಿಗೆ ತಿಳಿಸಿ ಮಾಡಿಸುವುದಕ್ಕೆ ಅವಕಾಶವಿದೆ. ಹಾಗೆ ಹೇಳೋಣ.

ಶ್ರೀ ಕೆ. ರತ್ನಕುಮಾರ್ ಶೆಟ್ಟಿ.—ಮೂಲ್ಕಿ, ಮಾನಂಪಾಡಿ, ಅತ್ತಿಕರಿಬೆಟ್ಟು ಕುಕ್ಕಟಿ ರಸ್ತೆಯನ್ನು ಬೇಗ ಮಾಡಿಸುವ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿರುವ ಎಲ್ಲ ರಸ್ತೆಗಳ ಬಗ್ಗೆಯೂ ಕೇಳಿದ್ದಾರೆಂದು ಕಾಣುತ್ತದೆ. ಆ ಕಾರಣದಿಂದ ರಸ್ತೆಗಳ ಹೆಸರುಗಳನ್ನು ಪ್ರಾಪ್ತಿಕ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಅವರು ಪ್ರಶ್ನೆಯಲ್ಲಿ ಕೊಟ್ಟಿರುವಂತೆ (ಎ), (ಬಿ), (ಸಿ), ಹೀಗೆ ವಿಭಾಗಗಳನ್ನು ಹೇಳಿದರೆ ಅನುಕೂಲವಾಗುತ್ತದೆ.

New Block of Chamarajendra Hospital

131. Sri H. B. JWALANAIAH (Hassan).—

Will the Minister for Health be pleased to state :—

(*a*) whether it has come to the notice of the Government that the newly added block to the Chamarajendra Hospital at Hassan has not been equipped with beds and other necessities ;

(*b*) whether the patients are lying on ground in the verandahs as there is no accommodation ;

(*c*) whether any requisition from the hospital authorities has been received for the supply of equipments and other materials ;

(*d*) whether the Government propose to take immediate steps to supply the same ;

(*e*) whether there is a proposal before the Government to sanction Cardiographic machine to Hassan Hospital as many heart attacked cases are coming to the said Hospital from different parts of Maland ?

† indicates that remarks or speeches have not been revised by the member concerned.

Sri Y. RAMAKRISHNA (Minister for Health).—

(*a*) Yes.

(*b*) Adequate facilities at present exist for 190 beds. Only extra patients are put on the verandah with sufficient protection against wind and rain, giving them proper bedding.

(*c*) Yes.

(*d*) Yes.

(*e*) Yes.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಹಾನನದ ಚಾಮರಾಜೇಂದ್ರ ಆಸ್ಪತ್ರೆಯ ಬಡಾವಣೆ ಮಾಡಿದಂಥ ಹೊಸ ಕಟ್ಟಡದಲ್ಲಿ ಬಹಳ ವಿಶಾಲವಾದ ಜಾಗ ಇದೆ. ಅದಕ್ಕೆ ಬೇಕಾದಂಥ ಹಾಸಿಗೆ, ವೈದ್ಯರು, ಉಪಕರಣಗಳು ಇಲ್ಲದೆ ಅನೇಕ ಜನ ಮೈಸೂರಿನಾಡಿನ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ರೋಗಿಗಳು ಕಾರಿಡಾರ್‌ನಲ್ಲಿ ಮಳೆಗಾಲದಲ್ಲಿ ಬಿಸಿಲುಕಾಲದಲ್ಲಿ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ವೈ. ರಾಮಕೃಷ್ಣ.—ನಮ್ಮ ಗಮನಕ್ಕೆ ಬಂದಿದೆ. ಆ ಕಟ್ಟಡವನ್ನು ನಮಗೆ ಬಿಟ್ಟು ಕೊಟ್ಟದ್ದು 4-12-68ರಲ್ಲಿ. ಕಳೆದ ತಿಂಗಳು ಅದಕ್ಕೆ ಬೇಕಾದ ಹಾಸಿಗೆ, ಮಂಚ ಇವುಗಳನ್ನು ಒದಗಿಸಲಾಗಿದೆ ಮತ್ತು ಲನನ್‌ಗಾಗಿ 10 ಸಾವಿರ ರೂಪಾಯಿ ಕೊಡಲಾಗಿದೆ. ಹೆಚ್ಚು ಸಿಬ್ಬಂದಿಯನ್ನು ಕಳಿಸಬೇಕಾಗಿದೆ, ಇನ್ನು ಒಂದೆರಡು ತಿಂಗಳಲ್ಲಿ ಸಿಬ್ಬಂದಿಯನ್ನೂ ಕಳಿಸಿಕೊಡುತ್ತೇವೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಎರೆಕ್ಟೋ ಕಾರ್ಡಿಯೋಗ್ರಾಫಿಕ್ ಯಂತ್ರವನ್ನು ಎಷ್ಟು ದಿವಸದಲ್ಲಿ ಕೊಡುತ್ತೀರಿ ?

ಶ್ರೀ ವೈ. ರಾಮಕೃಷ್ಣ.— ಬಜೆಟ್ ಅಂಗೀಕಾರವಾದ ಮೇಲೆ ಕೊಡುತ್ತೇವೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಹೆಚ್ಚುವರಿ ಸಿಬ್ಬಂದಿಯನ್ನು ಕೂಡಲೇ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಆಗಲೇ ಮಾಡಿದೆ.

ಶ್ರೀ ಕೆ. ಪಿ. ಚಿಕ್ಕೇ ಗೌಡ.— ಈ ಆಸ್ಪತ್ರೆಯಲ್ಲಿ ಸ್ಪೆಷಲ್ ವಾರ್ಡ್ ಕೊರತೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೈ. ರಾಮಕೃಷ್ಣ.—ಬಂದಿಲ್ಲ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಅಲ್ಲಿ ಸ್ಪೆಷಲ್ ವಾರ್ಡ್‌ನಲ್ಲಿ ಜನರಲ್ ವಾರ್ಡಿಗಿಂತ ಹೆಚ್ಚು ರೋಗಿಗಳು ತುಂಬಿರುವುದರಿಂದ ಹೊಸದಾಗಿ ಮಾಡಿರುವ ಕಟ್ಟಡದಲ್ಲಿ ಐದಾರು ಸ್ಪೆಷಲ್ ವಾರ್ಡ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅದು ಪರಿಶೀಲನೆ ಮಾಡುತ್ತೇವೆ.

ಶ್ರೀ ಎನ್. ಎ. ಚನ್ನೇ ಗೌಡ.—ರಾಜ್ಯದ ಬಹುತೇಕ ಆಸ್ಪತ್ರೆಗಳಲ್ಲಿ ಕಾರಿಡಾರ್‌ನಲ್ಲಿ ನೆಲದ ಮೇಲೆ ರೋಗಿಗಳನ್ನು ಮಲಗಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ! ಜಾಗ್ರತೆಯಾಗಿ ಹಾಸಿಗೆಗಳನ್ನು ಅಂಥ ಕಡೆಗಳಿಗೆ ಒದಗಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅವಶ್ಯಕತೆ ಇದ್ದಾಗ ರೋಗಿಗಳನ್ನು ಹೊರಗೆ ತೆಗೆದುಕೊಂಡು ಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ಆವಾಗ ಮಂಚವಿಲ್ಲದೆ ಇದ್ದರೂ ಕೆಳಗೆ ಹಾಸಿಗೆಯ ಮೇಲೆ ಕೆಲವರನ್ನು ಮಲಗಿಸಬೇಕಾಗುತ್ತದೆ.